International Journal of Kannada Research
www.kannadajournal.com

ISSN: 2454–5813
IJKR 2019; 5(4): 146-148
© 2019 IJKR
www.kannadajournal.com
Received: 13-08-2019
Accepted: 15-09-2019

**ಸೌಮ್ಯ ಎಚ್. ಎಲ್**
ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ. ನ್ಯೂಹಾರಿಜನ್ ಕಾಲೇಜು, ಮಾರತ್ತಹಳ್ಳಿ, ಬೆಂಗಳೂರು

Corresponding Author:
**ಸೌಮ್ಯ ಎಚ್. ಎಲ್**
ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ. ನ್ಯೂಹಾರಿಜನ್ ಕಾಲೇಜು, ಮಾರತ್ತಹಳ್ಳಿ, ಬೆಂಗಳೂರು

# ಗೃಹಭಂಗ-ಹೆಣ್ಣಿನ ಅಸ್ತಿತ್ವದ ಪುನರ್ ವ್ಯಾಖ್ಯಾನ

**ಸೌಮ್ಯ ಎಚ್. ಎಲ್**

ಎಸ್.ಎಲ್. ಭೈರಪ್ಪನವರ ಬದುಕಿನ ಒಂದು ಎಳೆಯನ್ನು ತೆಗೆದುಕೊಂಡು ಕಾದಂಬರಿಯ ಚೌಕಟ್ಟನ್ನು ನೀಡಿರುವ ಕೃತಿ ಗೃಹಭಂಗ. ಹೆಣ್ಣಿನ ಪಾತ್ರಗಳು ಪ್ರಧಾನವಾಗಿ ಕಂಡರೂ ಗಂಡಿನ ವಿವಿಧ ಮುಖವಾಡಗಳು ವ್ಯಕ್ತಿಗಳ ರೂಪದಲ್ಲಿ ಅನಾವರಣಗೊಂಡಿವೆ.
ಜೀವನದ ಅಸ್ತಿತ್ವ ಪ್ರಧಾನ ಭೂಮಿಕೆಯಾಗಿ ಕಾಣುವ ವಿಶಿಷ್ಟತೆಯನ್ನು ಕಾದಂಬರಿ ಒಳಗೊಂಡಿದೆ. ಹಾಗೆಯೇ ನೋಡಿದರೆ ಈ ಕಾದಂಬರಿಯಲ್ಲಿ ಬರುವ ಆಡಳಿತಾತ್ಮಕ ಹುದ್ದೆಗಳು ಸ್ವಾತಂತ್ರ್ಯಪೂರ್ವದಲ್ಲಿ ಭೂಕಂದಾಯ ಆಡಳಿತದ ಪ್ರಮುಖ ಹಣದ ಮೂಲವಾಗಿತ್ತು. ಪ್ರಸ್ತುತ ಕಾದಂಬರಿಯಲ್ಲಿ ಬರುವ ಶೇಖ್‌ದಾರ, ಶ್ಯಾನುಭೋಗ, ಪಟೇಲ, ತಳವಾರ ಇವುಗಳು ಪ್ರಸ್ತತ ಕನ್ನಡದ ಪಾರಿಭಾಷಿಕ ಪದಗಳಾಗಿವೆ.
ಕಾದಂಬರಿಯ ಆರಂಭದಲ್ಲಿ ಗಂಗಮ್ಮಳೆಂಬ **ವಿದವೆ** ಮಕ್ಕಳಾದ ಚೆನ್ನಿಗರಾಯ ಮತ್ತು ಅಪ್ಪಣ್ಣಯ್ಯ ಇಬ್ಬರು ಒರಟಾಗಿಯೇ ಬೆಳೆಯುವುದನ್ನು ಕಾಣಬಹುದಾಗಿದೆ. ರಾಮಣ್ಣನ ಎರಡನೆಯ ಹೆಂಡತಿಯಾಗಿ ಗಂಗಮ್ಮಳು ರಾಮೋಹಳ್ಳಿಗೆ ಬರುತ್ತಾಳೆ. ಬಡತನ ಮತ್ತು ನಾಗರೀಕ ಜಗತ್ತಿನಿಂದ ಹೊರಬಂದಂತೆ ಕಾಣುವ ಗಂಗಮ್ಮಳು **ಹೃದಯ** ಹೀನೆ ಮತ್ತು ಅಸಹ್ಯವಾಗಿ ಮಾತನಾಡುತ್ತಿರುವ ಹೆಂಗಸು. ಆಕೆಯ ಹೊಲಸು ಮಾತುಗಳು ಅವಳ ಮಕ್ಕಳಾಗಿ ಬೆಳೆಯುತ್ತಾರೆ. ವಂಶಪಾರಂಪರ್ಯವಾದ ಶ್ಯಾನುಭೋಗ ವೃತ್ತಿ ಚೆನ್ನಿಗರಾಯನಿಂದ ತಪ್ಪಿಹೋಗಿ ಪಟೇಲ ಶಿವಲಿಂಗೇಗೌಡನ ಮನೆಯವರ ಪಾಲಾಗುತ್ತದೆ.
ಗೃಹಭಂಗ  ಕಥೆಯ ಪ್ರಾರಂಭ ಪೂರ್ವ ಪೀಠಿಕೆಯಂತೆ ಮೊದಲ ಅಧ್ಯಾಯ ಅನಾವರಣಗೊಳ್ಳುತ್ತದೆ. ನಂತರದ ಹದಿನೈದು ಅಧ್ಯಾಯಗಳು ನಂಜಮ್ಮಳೆಂಬ ಪಾತ್ರದ ಸುತ್ತಾ ಪಾತ್ರಗಳ ಸನ್ನಿವೇಶಗಳನ್ನು ತರುತ್ತವೆ.
ನಾಗಲಪುರದ ಕಂಠಿಜೋಯಿಸರ ಮಗಳು ನಂಜಮ್ಮ. ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ತಂದೆಯ ತಾಯಿಯಾದ ಅಕ್ಕಮಳ ಆರೈಕೆಯಲ್ಲಿ ಬೆಳೆಯುತ್ತಾಳೆ. ಅವಳಿಗೆ ಕಲ್ಲೇಶಿಯೆಂಬ ಅಣ್ಣನು ಇರುತ್ತಾನೆ. ಕಂಠಿಜೋಯಿಸರು ವಯಸ್ಸಿಗೆ ಬಂದ ಮಗಳನ್ನು ಚೆನ್ನಿಗರಾಯನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಜೋಯಿಸನಿಗೆ ತನ್ನ ಅಳಿಯನಿಗೆ ಶ್ಯಾನುಭೋಗ ವೃತ್ತಿ ಸಿಗುತ್ತದೆ ಎಂಬ ಕಾರಣವೂ ಇರುತ್ತದೆ. ಚೆನ್ನಿಗರಾಯನು ವಯಸ್ಸಿಗೆ ಬಂದ ನಂತರ ಆ ವೃತ್ತಿಯನ್ನು ಕೊಡಿಸುವಲ್ಲಿ ಜೋಯಿಸರು ಪ್ರಮುಖ ಪಾತ್ರ ವಹಿಸುತ್ತಾರೆ. ದುರದೃಷ್ಟವಶಾತ್ ಚೆನ್ನಗರಾಯನು ಆ ವೃತ್ತಿಯನ್ನು

ಕಲಿತಿರುವುದಿಲ್ಲ. ದ್ಯಾವರಸಯ್ಯನೆಂಬ ಮತ್ತೊಬ್ಬ ಶ್ಯಾನುಭೋಗನಿಂದ, ವಿದ್ಯಾವಂತೆಯಾದ ನಂಜಮ್ಮಳು ಆ ಕೆಲಸವನ್ನು ಕಲಿಯುತ್ತಾಳೆ. ಅಂತಿಮವಾಗಿ ಎಲ್ಲಾ ಮನೆಯ ಜವಬ್ದಾರಿಯನ್ನು ನಿರ್ವಹಿಸುತ್ತಾಳೆ.

ಒಂದೊಂದು ಅಧ್ಯಾಯಗಳು ನಂಜಮ್ಮಳ ಬದುಕಿನ ವಿವಿಧ ಮಜಲುಗಳನ್ನು ತಿಳಿಸುತ್ತವೆ. ಇಡೀ ಕಥೆಯಲ್ಲಿ ನಂಜಮ್ಮಳ ಹೋರಾಟದ ಪಯಣ ಪ್ರಧಾನ ಭೂಮಿಕೆಯಾಗಿ ಕಾಣುತ್ತದೆ. ಅವಳ ನಿರಂತರ ಶ್ರಮದ ಬದುಕು ಒಂದು ಕಡೆಯಾದರೆ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಭಾರತದಂತಹ ಗುಲಾಮಿ ರಾಷ್ಟ್ರದಲ್ಲಿ ಕಂಡು ಬರುವ ಪ್ಲೇಗು ***ಎಂಬ*** ಕಾಯಿಲೆ ಇಡೀ ಕಥೆಯ ಉದ್ದಕ್ಕೂ ಸಂಘರ್ಷದ ವಾತಾವರಣವನ್ನು ನಿರ್ಮಿಸುತ್ತದೆ. ಪ್ಲೇಗಿನ ಹೊಡೆತಕ್ಕೆ ಕಲ್ಲೇಶಿಯೆಂಬ ನಂಜಮ್ಮಳ ಅಣ್ಣನಿಗೆ ತಗಲುವ ಸನ್ನಿವೇಶ ಬರುತ್ತದೆ. ಆ ಕಾರಣದಿಂದ ದೈಹಿಕವಾಗಿ ತನ್ನ ಪೋಲೀಸ್ ಹುದ್ದೆಗೆ ಬೇಕಾದ ಕ್ಷಮತೆಯನ್ನು ಕಳೆದುಕೊಳ್ಳುತ್ತಾನೆ. ಆತನ ಹೆಂಡತಿ ಕಮಲಳ ವಿಚಿತ್ರವಾದ ನಡವಳಿಕೆಯಿಂದ ಬೇಸತ್ತುವುದು ಕಥೆಯ ಉದ್ದಕ್ಕೂ ನಡೆದೇ ಇರುತ್ತದೆ.

ಗಂಡಸರ ಬೇಜವಬ್ದಾರಿಗಳು ಸಂಸಾರದ ಮೇಲೆ ಹೇಗೆ ವ್ಯತಿರಿಕ್ತ ಪರಿಣಾಮ ಬೀರುತ್ತವೆಂಬುದು ಚೆನ್ನಿಗರಾಯ ಮತ್ತು ನಂಜಮ್ಮಳ ಸಾಂಸರೀಕ ಜೀವನದಲ್ಲಿ ಜರುಗುತ್ತಿರುತ್ತದೆ. ಜೀವನ ನಿರ್ವಹಣೆಗೆ ಒಂದು ವೃತ್ತಿ ಅನಿವಾಯ ಮತ್ತ ಅವಶ್ಯಕ. ಆ ಹಿನ್ನಲೆಯಲ್ಲಿ ಚೆನ್ನಿಗರಾಯನ ಸೋಮಾರಿತನದಿಂದ ಸಂಸಾರದ ಹಳಿಯೇ ಇರುವುದಿಲ್ಲ. ನಂಜಮ್ಮ ಮದುವೆಯಾಗಿ ಬಂದ ನಂತರ ಬದುಕಿನ ಕ್ರಮದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅದು ***ಎಥಾ*** ಪ್ರಕಾರವಾಗಿರುತ್ತದೆ. ಆದರೂ ನಂಜಮ್ಮಳ ಜವಬ್ದಾರಿಯುತ ಸಂಸಾರದ ನಿರ್ವಹಣೆ ಮತ್ತು ಕೈಗೊಂಡ ಪರೋಕ್ಷ ಶ್ಯಾನುಭೋಗ ವೃತ್ತಿ ಅವಳ ಸಂಸಾರವನ್ನು ಕನಿಷ್ಠ ಪ್ರಮಾಣದ ಜೀವನ ನಿರ್ವಹಿಸಲು ಸಾಧ್ಯವಾಗುತ್ತದೆ.

ಒಂದೇ ಕುಟುಂಬದಲ್ಲಿನ ಹೆಣ್ಣಿನ ವಿಭಿನ್ನ ಧೋರಣೆಗಳು ಕಾದಂಬರಿಯಲ್ಲಿ ಕಂಡುಬರುತ್ತವೆ. ಗಂಗಮ್ಮಳು ವಾಚಾಳಿ, ಹೀನ ಮಾತುಗಳ ನೇತಾರಳಾಗಿ ಕಾಣುತ್ತಾಳೆ. ಆಕೆಯ ಚಿಕ್ಕ ಸೊಸೆ ಸಾತು ಗಂಡ ಅಪ್ಪಣ್ಣಯ್ಯನ ಬೇಜವಬ್ದಾರಿಯನ್ನು ಸಹಿಸಲಾಗದೆ ಹೊರಬರುತ್ತಾಳೆ. ಅಂದಿಗೆ ಮತ್ತೊಬ್ಬ ಗಂಡನ ಜೊತೆ ಬದುಕಿನ ನಿರ್ವಹಣೆಗೆ ನಿಲ್ಲುತ್ತಾಳೆ. ಹಾಗೂ ಮಕ್ಕಳನ್ನು ಸಾಕಿಕೊಳ್ಳುತ್ತಾಳೆ. ಅತ್ತೆ ಅಥವಾ ಗಂಡನ ನಡವಳಿಕೆಯನ್ನು ಸಹಿಸಿಕೊಳ್ಳಲು ಮುಂದಾಗುವುದಿಲ್ಲ. ಆದರೆ ನಂಜಮ್ಮ ಇಡೀ ಕಥೆಯ ಉದ್ದಕ್ಕೂ ಹೋರಾಟದ ಹೆಣ್ಣಾಗಿಯೇ ಕೊನೆಗೊಳ್ಳುತ್ತಾಳೆ. ಗಂಗಮ್ಮಳ ಹಸಿವಿನ ಹಾಗೂ ಹೀಯಾಳಿಕೆಯ ಬದುಕಿನಲ್ಲಿ ನೈತಿಕ-ಅನೈತಿಕ ಪ್ರಶ್ನೆಗಳನ್ನು ಹುಡುಕಲು ಸಾಧ್ಯವಾಗುವುದಿಲ್ಲ. ಸಾತು ಅದನ್ನು ಮೀರಿ ನಿಲ್ಲುತ್ತಾಳೆ. ಆದರೆ ಬದುಕಿನುದ್ದಕ್ಕೂ ನಂಜಮ್ಮ ನೈತಿಕತೆಯನ್ನು ಉಳಿಸಿಕೊಳ್ಳುತ್ತಾಳೆ.

ಕಥೆಯ ಉದ್ದಕ್ಕೂ ಕಾಡುವ ಪ್ರಶ್ನೆ ಹಸಿವಿನಿಂದ ಕೂಡಿದ ಸಮಾಜ. ಪ್ಲೇಗ್ ಎಂಬ ಮಾರಿ ಮನುಷ್ಯನನ್ನು ಎಷ್ಟು ಕೃಶನಾಗಿ ಮಾಡುತ್ತದೆಯೋ ಅದಕ್ಕಿಂತ ಹೆಚ್ಚಿನ ಪರಿಣಾಮ ಅವರ ಬದುಕನ್ನು ಕಿ**ತ್ತು**ಕೊಳ್ಳುವ ಪ್ಲೇಗ್ ಎಂಬ ಮಾರಿಯಿಂದ ಉಂಟಾದ ಕ್ಷಾಮ. ಹಸಿವಿನಿಂದ ತತ್ತರಿಸುವ ಜನಾಂಗ ಕಂಡುಬರುತ್ತದೆ. ಕಥೆಯ ಪ್ರಧಾನ ಭೂಮಿಕೆಯಲ್ಲಿ ಇದರ ಪಾತ್ರ ಕೂಡ ಪ್ರಧಾನವಾಗಿ ಕಂಡುಬರುತ್ತದೆ. ಕಾಯಿಲೆಯಿಂದ ನರಳುತ್ತಿದ್ದ ನಂಜಮ್ಮಳು ಗಂಡನಿಂದ ಸ್ವಲ್ಪ ಅಡುಗೆಯನ್ನು ನಿರೀಕ್ಷಿಸಿದಾಗ ತಾನು ಗಂಡಸು ಎಂಬ ಅಹಂಭಾವ ಅವನಲ್ಲಿ ತೋರುತ್ತದೆ. ತಾನು ಅಡುಗೆ ಮಾಡುವುದಿಲ್ಲವೆಂದು ಹೇಳುತ್ತಾನೆ. ಆದರೂ ಆಕೆಯೇ ಅಡುಗೆ ಮಾಡಲು ಮುಂದಾಗುತ್ತಾಳೆ. " ತಾಳ್ಮೆಗೆಡಕೂಡದೆಂಬ ತನ್ನ ಸಂಕಲ್ಪ ನೆನಪಾಗಿ ನಂಜಮ್ಮ ಪುನಃ ಮಾತನಾಡಲಿಲ್ಲ. ಮಗ್ಗದಕೇರಿಗೆ ಹೋಗಿ ಪುಟ್ಟವ್ವನನ್ನು ಕರೆದುಕೊಂಡು ಬಂದಳು. ಎರಡು ಬಿಲ್ಲೆಗೆ ಒಂದು ಮೊರ ರಾಗಿ ಬೀಸಿಕೊಡುವುದಾಗಿ ಪುಟ್ಟವ್ವ ಬೀಸುವ ಕಲ್ಲಿನ ಮುಂದೆ ಕುಳಿತಳು. ನಂಜಮ್ಮ ಚನ್ನಶೆಟ್ಟಿಯ ಅಂಗಡಿಗೆ ಹೋಗಿ ಮೆಣಸಿನಕಾಯಿ, ಕೊತಂ_ಬರಿ ಬೀಜ, ಉಪ್ಪು, ಎಣ್ಣೆ ಮೊದಲಾಗಿ ಒಟ್ಟು ಒಂದು ರೂಪಾಯಿಯ ಸಾಮಾನುಗಳನ್ನು ತಂದು ಅಡಿಗೆ ಪ್ರಾರಂಭಿಸಿದಳು. ಹನ್ನೊಂದು ಗಂಟೆಯ ಹೊತ್ತಿಗೆ ಅವರೇಕಾಳಿನ ಹುಳಿ, ಹಿಟ್ಟು, ರಾಮಣ್ಣನಿಗೆ ರೊಟ್ಟಿ ಸಿದ್ಧವಾದುವು. ನೆನ್ನೆ ಸಹ ಅವಳು ಸ್ನಾನ ಮಾಡಿರಲಿಲ್ಲ. ಬಾವಿಯಲ್ಲಿ ನೀರು ಸೇದಿ ಹುಡುಗರಿಗೂ ಮೈ ತೊಳೆದು ತಾನು ಮಡಿ ಉಟ್ಟು ಬೇರೆ ಸೀರೆಯುಟ್ಟು ಒಳಗೆ ಬಂದಳು. ನೆನ್ನೆಯಂತೆ ಯಜಮನರು ಬಾಳೆ ಎಲೆ ಹಾಕಿಕೊಂಡು ಹಿಟ್ಟಿನ ಮುದ್ದೆ ನುಂಗುತ್ತಿದ್ದಾರೆ. ತನಗೂ ಮಕ್ಕಳಿಗೂ ಉಳಿಸಿ ಎಂದು ಅವಳು ಹೇಳಲಿಲ್ಲ. ಆದರೆ ಅವರೇ ಮೂರು ಮುದ್ದೆಗಳನ್ನು ಉಳಿಸಿ ಮೇಲೆ ಎದ್ದರು. ಅವಳು ಒಟ್ಟು ತಿರುವಿದ್ದುದು ಏಳು ಮುದ್ದೆ. ಅವಳು ಹುಳಿ ಹಾಕಿ ಕೊಂಡು ಪಾರ್ವತಿಯೊಡನೆ ಊಟಕ್ಕೆ ಕುಳಿತಳು. ತಾನು ಒಟ್ಟು ಒಂದೂವರೆ ಮುದ್ದೆ ನುಂಗಿದಳು. ಪಾರ್ವತಿಗೆ ಅರ್ಧಕ್ಕೆ ಸಾಕಾಯಿತು. ರೊಟ್ಟಿ ಕಡಿದ ರಾಮಣ್ಣ ನಡುವೆ ನಾಲ್ಕು ನೀರು ಕುಡಿದು 'ಅನ್ನ' ಎಂದು ಅಳಲು ಪ್ರಾರಂಭಿಸಿತು. 'ಅಂಗ್ಡೀಲಿ ಒಂದೂವರಾಣೆ

ಕೊಟ್ಟು ಒಂದು ಸೇರು ಅಕ್ಕಿನಾದ್ರೂ ತರಬೇಕಾಗಿತ್ತು' ಎಂದು ಯೋಚಿಸುತ್ತಾ ಅವಳು ಊಟ ಮುಗಿಸಿದಳು. ಹೊಟ್ಟೆಗೆ ಮುದ್ದೆ ಬಿದ್ದ ತಕ್ಷಣ ಕಳಲಿಕೆ ಬಂದಂತಾಗಿ ಹೊರಗೆ ಬಂದು ಜಮಖಾನ ಹಾಕಿಕೊಂಡು ಮಲಗಿದಳು." (ಗೃಹಭಂಗ, ಪುಟ 125)

ಕಥೆಯಲ್ಲಿ ಕಂಡುಬರುವ ಮತ್ತೊಂದು ಸಾಮಾನ್ಯ ಅಂಶವೆಂದರೆ ಹಸಿವು. ಅದಕ್ಕಾಗಿ ಭಿಕ್ಷೆಯನ್ನು ಬೇಡಿ ತಿನ್ನುವ ಸನ್ನಿವೇಶಗಳು ಬರುತ್ತವೆ. ಭಿಕ್ಷೆಯನ್ನು ಬೇಡಿದ ವ್ಯಕ್ತಿಯ ಬಳಿ ಮತ್ತೊಂದು ರೀತಿ ಬೇಡುವ ಪಡೆಯುವ ವಿಪರ್ಯಾಸ ಸಂಗತಿಯಿದೆ. ಮಹಾದೇವಯ್ಯನು ಭಿಕ್ಷೆಯನ್ನು ಬೇಡಿ ತಂದಿದ್ದ ದವಸಧಾನ್ಯಗಳನ್ನು ನಂಜಮ್ಮಳು ಪಡೆಯುವ ವಿಪರ್ಯಾಸವಿದೆ.

ಕಾಮಕ್ಕೆ ಹೆಣ್ಣು-ಗಂಡಿನ ಬೇದ ಭಾವವಿಲ್ಲ. ಅವಶ್ಯಕವಾಗಿ ಬೇಕಾಗಿರುವ ಸಂದರ್ಭದಲ್ಲಿ ಹೆಣ್ಣು ಕೂಡ ಮುಂದಾಗುತ್ತಾಳೆ ಕಥೆಯಲ್ಲಿನ ಗಿರಿಯಶೆಟ್ಟಿಯು ಹೆಂಡತಿ ನರಸಿಯ ಜೊತೆ ಅಪ್ಪ ಚೆನ್ನಸೆಟ್ಟಿಯು ದೈಹಿಕ ಸಂಬಂಧವನ್ನು ಹೊಂದಿದ್ದಾರೆಂದು ಆರೋಪ ಹೊರೆಸುತ್ತಾನೆ. ಆ ಕಾರಣದಿಂದ ನ್ಯಾಯ ಕಟ್ಟೆಗೆ ಕರೆಸಿದಾಗ ಆಕೆಯ ಅಭಿಪ್ರಾಯವನ್ನು ಕೇಳುತ್ತಾರೆ. ಆಗ

"ಸ್ವಾಮಿಯೋರೇ, ನೀವು ಈಟೊಂದೆಲ್ಲ ಏಳ್ತೀರಲಾ, ನಾನೊಂದ್ ಕೇಳ್ತೀನಿ ಜವಾಬ್ ಕೊಡ್ತೀರಾ?" ನರಸಿ ಪುರೋಹಿತದ್ವಯರನ್ನು ಕೇಳಿದಳು.

'ಕೇಳು, ಕೇಳು. ಅಗತ್ಯವಾಗಿ ಕೇಳು' ಇಬ್ಬರು ಕೂಡಿ ಎಂದರು.

'ಅನ್ನೆಲ್ಡಾಳುದ್ದ ಬಾವಿಗೆ ಆರಾಳುದ್ದ ಅಗ್ಗ ಬುಟ್ರೆ ಎಟುಕ್‌ತೈತಾ?' ಎಂದು ಪ್ರಶ್ನಿಸುತ್ತಾಳೆ.(ಗೃಹಭಂಗ, ಪುಟ-137) ಆ ನ್ಯಾಯಕಟ್ಟೆಯಲ್ಲಿ ಅನೇಕರಂತೆ ಕಲ್ಲೇಶಿ, ರೇವಣಶೆಟ್ಟಿಯೂ ಇರುತ್ತಾರೆ. ಮುಂದೊಂದು ದಿನ ಆ ಇಬ್ಬರೂ ಕೂಡ ನರಸಿಯ ದೈಹಿಕ ಗಿರಾಕಿಗಳಾಗುತ್ತಾರೆಂಬುದು ವಿಪರ್ಯಾಸ.

ನರಸಿಯು ತನ್ನ ದೈಹಿಕ ಹಾಗೂ ಬದುಕಿನ ನಿರ್ವಹಣೆಗೆ ತನ್ನದೆ ಆದ ಹಾದಿಯನ್ನು ತುಳಿಯುತ್ತಾಳೆ. ಅದಕ್ಕಾಗಿ ಸಂಸಾರ, ವ್ಯಕ್ತಿಗಳು ಪ್ರಧಾನವಾಗಿ ಕಾಣುವುದಿಲ್ಲ. ನಂಜಮ್ಮಳ ಚೆನ್ನಿಗರಾಯನು ಕೂಡ ಎಲೆಯನ್ನು ಕೇಳಲು ಹೋಗುತ್ತಾನೆ. ವಿಪರ್ಯಾಸವೆಂದರೆ ಚೆನ್ನಗರಾಯನು ತನ್ನ ಗಿರಾಕಿಯೆಂದು ನರಸಿ ಭಾವಿಸಿ ಆ ವಿಚಾರದಲ್ಲಿ ಸೋಲುತ್ತಾಳೆ.

ಪ್ಲೇಗೆಂಬ ಕಾಯಿಲೆಯ ಮಾರಿ ಇಡೀ ಕುಟುಂಬ-ಜನಾಂಗವನ್ನು ನಾಶ ಗೊಳಿಸುತ್ತಾ ಹೋಗುತ್ತದೆಂಬುದನ್ನು ಭೈರಪ್ಪನವರು ಕಥೆಯಲ್ಲಿ ತರುತ್ತಾರೆ. ಅಂತಹ ಪ್ಲೇಗಿಗೆ ಬಲಿಯಾಗುವುದು ನಂಜಮ್ಮಳ ಕುಟುಂಬವೇ ಆಗುತ್ತದೆ. ನಂಜಮ್ಮಳ ಮಗಳು ಪಾರ್ವತಿಗೆ ಮದುವೆಯಾಗಿರುತ್ತದೆ. ಆಕೆಯೂ ಕೂಡ ಪ್ಲೇಗಿಗೆ ಬಲಿಯಾಗುತ್ತಾಳೆ. ರಾಮಣ್ಣ ಹಿರಿಯ ಮಗ ಆತನು ಕೂಡ ಪ್ಲೇಗಿಗೆ ಬಲಿಯಾಗುವುದನ್ನು ತರುವ ಸನ್ನಿವೇಶ ಓದುಗನ ಮನ ಕಲಕುವಂತೆ ಮಾಡುತ್ತದೆ. ಮಕ್ಕಳ ಸಾವನ್ನು ಕಣ್ಣೆದುರು ನೋಡುವ ನಂಜಮ್ಮಳು ಆ ಕ್ಷಣ ಕುಗ್ಗಿದರೂ ಮುಂದೆ ಧೈರ್ಯವಾಗಿ ಸಂಸಾರವನ್ನು ಮುನ್ನೆಡೆಸುವ ಸ್ಥಿತಿಯನ್ನು ಕಾದಂಬರಿಗಾರ ತರುತ್ತಾನೆ. ಕಥೆಯ ಅಂತಿಮದಲ್ಲಿ ನಂಜಮ್ಮಳು ಪ್ಲೇಗಿನ ಜ್ವರದ ತಾಪಕ್ಕೆ ಬಲಿಯಾಗುತ್ತಾಳೆ. ಆಕೆಯು ಸಾಯುತ್ತಾಳೆ. ಇಡೀ ಕಥೆಯನ್ನು ಆವರಿಸಿದ ನಂಜಮ್ಮಳು ಚೆನ್ನಿಗರಾಯನ ಕುಟುಂಬವನ್ನು ಸಾಕುತ್ತಾಳೆ. ಆಕೆ ಸತ್ತ ನಂತರ ಪುನಃ ಮದುವೆಯ ಕಡೆ ಚೆನ್ನಿಗರಾಯನು ಒಲವು ತೋರುವ ವಿಚಿತ್ರ ನಡವಳಿಕೆ ಕಂಡುಬರುತ್ತದೆ. ಪುರುಷನಷ್ಟು ಸ್ತ್ರೀಗೆ ಸ್ವಾತಂತ್ರ್ಯವಿಲ್ಲವೆಂಬುದು ಅಂದಿನಿಂದಲೂ ಕಂಡುಬರುತ್ತದೆ.

ಅಪ್ಪಣ್ಣಯ್ಯನು ನಂಜಮ್ಮಳ ಮೈದುನ. ಆರಂಭದಲ್ಲಿ ಅವನು ಬೇಜವಬ್ದಾರಿಯ ವ್ಯಕ್ತಿಯಾಗಿ ಕಂಡರೂ ಅಂತಿಮವಾಗಿ ಆತನು ಅತ್ತಿಗೆಯ ಶ್ರಾದ್ಧವನ್ನು ಮಾಡುವುದು ಮಾತ್ರ ಮಾನವೀಯತೆಗೆ ಉದಾಹರಣೆಯಾಗುತ್ತದೆ. ಅತ್ತಿಗೆಯ ಮತ್ತೊಬ್ಬ ಮಗ ವಿಶ್ವನನ್ನು ತಾನೇ ಸಾಕಿಕೊಳ್ಳುತ್ತೇನೆಂದು ಮುಂದೆ ಬರುತ್ತಾನೆ.

ಲೇಖಕರು ಹೆಣ್ಣಿನ ನಿರಂತರ ಹೋರಾಟ, ಗಂಡಿನ ಬೇಜಬ್ದಾರಿ ನಡವಳಿಕೆಗಳು, ಅಂತಿಮವಾಗಿ ಕಥೆಯನ್ನು ಪೂರ್ಣಗೊಳಿಸುವ ಪರಿ ಓದುಗನಲ್ಲಿ ಕಥೆ ನೆಲೆಸುವಂತೆ ಮಾಡುತ್ತದೆ. ಅಲ್ಲಿನ ಆಡಳಿತಾತ್ಮಕ ಹುದ್ದೆಗಳನ್ನು ಪಕ್ಕಕ್ಕಿಟ್ಟು ಹೆಣ್ಣಿನ ಮನಸ್ಸಿನ ಒಳತೋಟಿಗಳನ್ನು ನೋಡುವುದು ಅವಶ್ಯಕವಾಗಿ ಕಂಡುಬರುತ್ತದೆ.

## ಗ್ರಂಥಋಣ:


1. ಗೃಹಭಂಗ - ಎಸ್.ಎಲ್. ಭೈರಪ್ಪ
2. ಎಸ್.ಎಲ್.ಭೈರಪ್ಪ - ಪ್ರಧಾನ್ ಗುರುದತ್ತ
3. ಕಾದಂಬರಿಯ ಸ್ವರೂಪ - ಜಿ.ಎಸ್. ಅಮೂರ.